**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ: ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.462/2024**

| | | |
|---|---|---|
| ಸಾಕ್ಷಿದಾರರ ಹೆಸರು | : ರಾಬರ್ಟ್ ಡಿ ಸೋಜಾ | ಪ್ರಾಸಾ -1 |
| ತಂದೆಯ ಹೆಸರು | : ಇಸಿಡೋರ್ ಡಿ ಸೋಜಾ | ಚಾಸಾ-4 |
| ವಯಸ್ಸು | : 69 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕ:25.09.2024 |
| ವಾಸಸ್ಥಳ | : ಪುಂಜಾರ್ಲಕಟ್ಟೆ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ಈ ಹಿಂದೆ ನೋಡಿದ್ದೇನೆ. ಚಾಸಾ-1 ಮತ್ತು 2 ರವರನ್ನು ನಾನು ಬಸ್ ನಲ್ಲಿ ಚಾಲನೆ ಮಾಡುವಾಗ ನೋಡಿದ್ದೇನೆ. ಅವರಿಬ್ಬರು KSRTC ಬಸ್ ನ ಚಾಲಕರು ಮತ್ತು ಕಂಡಕ್ಟರ್.

ದಿ.02.11.2023 ರಂದು ನಾನು ಉಜಿರೆಯಿಂದ ಮೂಡಿಗೆರೆಗೆ KSRTC ಬಸ್ ನಲ್ಲಿ ಸಂಚರಿಸುತ್ತಿರುವಾಗ ಬೆಳಗ್ಗೆ ಸುಮಾರು 11.00 ಗಂಟೆ ಸಮಯದಲ್ಲಿ ಚಾರ್ಮುಡಿ ಘಾಟಿಯಲ್ಲಿ ನಾನು ಇದ್ದ ಬಸ್ ನಿಧಾನವಾಗಿ ಚಲಿಸುತ್ತಿತ್ತು. ಆ ಸಮಯಕ್ಕೆ ಕೊಟ್ಟಿಗೆಹಾರದಿಂದ ಉಜಿರೆ ಮಾರ್ಗವಾಗಿ ಬಸ್ಸಿನ ಎದುರಿನಿಂದ ಸ್ಕೂಟರ್ ವಾಹನದವರು ಅತೀವೇಗ ಮತ್ತು ನಿಲರ್ಕ್ಷತನದಿಂದ ಬೊಬ್ಬೆಹೊಡೆಯುತ್ತಾ ಬಸ್ಸಿನ ಮುಂದೆ ಚಲಿಸಿದರು. ಸ್ವಲ್ಪ ಸಮಯದ ನಂತರ ಒಂದು ಸ್ಕೂಟರ್ ಬಸ್ಸಿನ ಹಿಂಬದಿಯಿಂದ ಹಾರನ್ ಹೊಡೆದುಕೊಂಡು ಬಂದು ಬಸ್ಸನ್ನು ಅಡ್ಡಗಟ್ಟಿ ನಿಲ್ಲಿಸಿದರು. ಆಗ ಬಸ್ಸಿನ ಚಾಲಕರು ಬಸ್ಸನ್ನು ಪಕ್ಕಕ್ಕೆ ನಿಲ್ಲಿಸಿದರು. ಆ ಸಮಯಕ್ಕೆ ದ್ವಿಚಕ್ರ ವಾಹನದಲ್ಲಿ ಬಂದ ಒಬ್ಬ ಯುವಕ ಮತ್ತು ಹೆಂಗಸು ಬಸ್ಸಿನ ಚಾಲಕರನ್ನು ಕುರಿತು ನಿನಗೆ ಡ್ರೆವಿಂಗ್ ಮಾಡಲು ಬರುವುದಿಲ್ಲವ ಎಂದು ಬೈದು ಎಲ್ಮೇಟ್ ನಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಶುರು ಮಾಡಿದರು. ಆಗ ಬಸ್ಸಿನ ನಿರ್ವಾಹಕರು ಬಸ್ ನ್ನು ಇಳಿದು ಆ ಯುವಕನ ಬಳಿ ಹೋದಾಗ ಆ ಯುವಕನ್ನು ನಿರ್ವಾಹಕರ ತಲೆಗೆ ಎಲ್ಮೇಟ್ ನಿಂದ ಹೊಡೆದು ತನ್ನ ಕೈಯಿಂದ ಕೆನ್ನೆಗೆ ಹೊಡೆದು ಅವರ ಅಂಗಿಯನ್ನು ಹಿಡಿದು ಎಳೆದಾಡುತ್ತಿದ್ದರು.

ನಾವು ಪ್ರಯಾಣೀಕರು ಬಸ್ಸಿನಿಂದ ಇಳಿದು ಆ ಯುವಕನಿಗೆ ಸಮಾಧನಾ ಮಾಡಲು ಪ್ರಯತ್ನಿಸಿದೆವು. ಘಟನೆಯಿಂದ ನಾವು ಸಮಯಕ್ಕೆ ಸರಿಯಾಗಿ ಹೋಗಬೇಕಿದ್ದ ಸ್ಥಳಕ್ಕೆ ತಲುಪದ ಕಾರಣಕ್ಕೆ ನಮಗೆ ಬಹಳ ಅನಾನುಕೂಲವಾಗಿದೆ. ಯುವಕನ ವಾಹನ ಸಂ.KA-18-1536 ಎಂದು ನಾನು ಗಮನಿಸಿದೆ. ಆನಂತರ ಬಸ್ಸಿನ ಚಾಲಕರು ಬಣಕಲ್ ಪೋಲಿಸ್ ಠಾಣೆಗೆ ಬಂದು ದೂರು ಕೊಟ್ಟಿದ್ದಾರೆ. ಜಗಳವಾಗುವ ಸಮಯಕ್ಕೆ ಯುವಕನು ತನ್ನ ಪ್ಯಾಂಟ್ ನ್ನು ತೆರೆದು ಅಸಭ್ಯ ವರ್ತನೆ ಮಾಡಿರುತ್ತಾರೆ. ನಾವು ಇದ್ದ ಬಸ್ಸಿನಲ್ಲಿ ಹೆಂಗಸರು ಇದ್ದರು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ತಾವು ಹೇಳಿದ ಯುವಕ

ಈತನೇ ಎಂದು ಗುರುತಿಸುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಹೆಚ್.ಎಸ್.ಆರ್. ವಕೀಲರಿಂದ:</u>**

ನಾನು ಬೆಳ್ತಂಗಡಿ ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುಲು ಒಂದು ಬಾರಿ ಹೋಗಿದ್ದೆ. ಪುಂಜಾರ್ಲಕಟ್ಟೆಯಿಂದ ಉಜಿರೆಗೆ 20 ಕಿ.ಮೀ ಇದೆ. ಆ ದಿನ ನಾನು ಉಜಿರೆಗೆ ಬಂದಿದ್ದೆ. ಅಂದು ನನ್ನ ಮನೆಯಿಂದ ಬೆ. ಸುಮಾರು 8.15 ಕ್ಕೆ ಹೊರಟೆ. ಉಜಿರೆಗೆ ಬಂದಾಗ ಬೆ.9.00 ಗಂಟೆಯಾಗಿರಬಹುದ. ಉಜಿರೆಯಲ್ಲಿ 5-10 ನಿಮಿಷ ಇದ್ದೆ ಆದರೆ ಸಮಯ ನನೆಪಿಲ್ಲ. ನಾನು ಹೇಳಿದ ಬಸ್ ಉಜಿರೆಗೆ ಬೆ.9.00 ಸಮಯಕ್ಕೆ ಬಂದಿತ್ತು. ನಾನು ಬಸ್ಸನ್ನು ಏರಿದಾಗ ಅದರಲ್ಲಿ ಸುಮಾರು 10-20 ಜನ ಪ್ರಯಾಣೀಕರು ಇದ್ದರು. ನಾನು ಬಸ್ಸಿನ ಟಿಕೇಟ್ ಪಡೆದಿದ್ದೆ. ಆ ಟಿಕೇಟ್ ನ್ನು ನಾನು ಪೋಲಿಸರಿಗೆ ಕೊಟ್ಟಿಲ್ಲ. ನಾನು ಬಸ್ಸಿನ ಮುಂಭಾಗದಲ್ಲಿರುವ ಎಡಬದಿಯ 2 ನೇ ಸೀಟ್ ನ ಕಿಟಕಿ ನಂತರದ ಸೀಟ್ ನಲ್ಲಿ ಕೂತಿದ್ದೆ. ಕಡೂರು-ಮಂಗಳೂರು ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಆ ರಸ್ತೆಯಲ್ಲಿ ಪ್ರತೀದಿನ ಬಹಳ ವಾಹನಗಳು ಸಂಚರಿಸುತ್ತಿರುತ್ತವೆ ಎಂದರೆ ಸರಿ. ಚಾರ್ಮುಡಿಯಿಂದ ಕೊಟ್ಟಿಗೆಹಾರದವರೆಗೂ ಅತ್ಯಂತ ಕಿರಿದಾದ ರಸ್ತೆ ಎಂದರೆ ಸರಿ.

ಬೈಕಿನ ಚಾಲಕ ಬರುತ್ತಿರುವಾಗ ವಾಹನದ ಸಂಖ್ಯೆಯನ್ನು ನಾನು ನೋಡಲಿಲ್ಲ. ದ್ವಿಚಕ್ರವಾಹದ ಚಾಲಕ ಬರುತ್ತಿದ್ದ ಸ್ಥಳದ ಹೆಸರು ನನಗೆ ಗೊತ್ತಿಲ್ಲ. ಆ ಸ್ಥಳ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದಿರಬಹುದು. ಆ ಸ್ಥಳದಲ್ಲಿ ಬಸ್ಸನ್ನು ನಿಲ್ಲಿಸಿರಲಿಲ್ಲ. ಅಲ್ಲಿ ದ್ವಿಚಕ್ರವಾಹನದ ಚಾಲಕನೂ ಸಹಾ ಸದರಿ ವಾಹನವನ್ನು ನಿಲ್ಲಿಸಿರಲಿಲ್ಲ. ದ್ವಿಚಕ್ರವಾಹನ ಅತೀವೇಗವಾಗಿ ಸಂಚರಿಸಿತ್ತು ಎಂದು ಹೇಳಿದ ಸ್ದಳದಿಂದ ಬಸ್ಸು 2 ಕಿ.ಮೀನಷ್ಟು ಸಂಚರಿಸಿದ ನಂತರ ನಾನು ಹೇಳಿದಂತೆ ಘಟನೆ ನಡೆಯಿತು. ಘಟನೆ ನಡೆದಿದೆ ಎಂದು ಹೇಳಲಾದ ಸ್ಥಳದ ಹೆಸರು ಮತ್ತು ಅದು ಯಾವ ಜಿಲ್ಲೆಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಗಲಾಟೆಯಾಗಿ 2 ನಿಮಿಷದ ನಂತರ ನಾನು ಬಸ್ಸಿನಿಂದ ಇಳಿದಿದ್ದೆ. ಇದನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ. ನನ್ನೊಂದಿಗೆ 2-3 ಜನ ಇಳಿದು ಬಂದರು. ಅವರ ಹೆಸರು ಹೇಳಲು ಆಗುವುದಿಲ್ಲ. ಗಲಾಟೆ ಅಂದಾಜು 5-6 ನಿಮಿಷ ಆಗಿರಬಹುದು. ಆಗ ಸಮಯ ಅಂದಾಜು 10.45 ರಿಂದ 11.00 ಆಗಿರಬಹುದು. ಉಜಿರೆಯಿಂದ ಕೊಟ್ಟಿಗೆಹಾರಕ್ಕೆ ಒಂದು ಗಂಟೆಯ ಪ್ರಯಾಣ ಎಂದರೆ ಸರಿ. ಎಲ್ಮೇಟ್ ಕಪ್ಪು ಬಣ್ಣದಾಗಿತ್ತು ಆದರೆ ಅದು ಯಾವ ಕಂಪೆನಿಯದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ಸ್ಕೂಟರ್ ಯಾವ ಕಂಪೆನಿಯದ್ದು ಎಂದು ಸಹಾ ಹೇಳಲು ಆಗುವುದಿಲ್ಲ. ಸ್ಕೂಟರ್ ನಲ್ಲಿ ಇದ್ದ ವ್ಯಕ್ತಿಯ ಹೆಸರನ್ನು ಆ ದಿನ ನಾನು ತಿಳಿದುಕೊಂಡಿಲ್ಲ. ಸ್ಕೂಟರ್ ನಲ್ಲಿ ಇದ್ದ ಮತ್ತೊಬ್ಬರ ಹೆಸರು ಸಹಾ ನನಗೆ ಗೊತ್ತಿಲ್ಲ. ಅವರಿಬ್ಬರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಎಲ್ಮೇಟ್ ನಿಂದ ತುಂಬಾ ಸಲ ಹೊಡೆದು ಮತ್ತೆ ಹೊಡೆಯಲು ಪ್ರಯತ್ನಿಸುತ್ತಿದ್ದರು. ಎಲ್ಮೇಟ್ ನಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಹೊಡೆದರೆ ಗಾಯವಾಗುತ್ತದೆ ಎಂದರೆ ಇರಬಹುದು.

ನಿರ್ವಾಹಕರಿಗೆ ಗಾಯವಾಗಿರಲಿಲ್ಲ. ಬಲಭಾಗದ ಕೆನ್ನೆಗೆ ಹೊಡೆದಿದ್ದಾರೆ. ಯಾವ ಕೈನಿಂದ ಬಲಗೆನ್ನೆಗೆ ಹೊಡೆಯಲಾಗಿದೆ ಎಂದು ಹೇಳಲು ಆಗುವುದಿಲ್ಲ. ನಾನು ಹೇಳಿದ ದಿನಾಂಕದಂದು ನಾನು ಹೇಳಿದ ಬಸ್ ನಲ್ಲಿ ನಾನು ಸಂಚರಿಸಿಲ್ಲ ಎಂದರೆ ಸರಿಯಲ್ಲ. ಹೊಡೆಯುತ್ತಿದ್ದಾಗ ನಾನು ಬಿಡಿಸಲು ಪ್ರಯತ್ನಿಸಲಿಲ್ಲ. ನನ್ನೊಂದಿಗೆ ಇದ್ದ ಸಹ ಪ್ರಯಾಣಿಕರು ಸಹಾ ಬಾಯಿಯಲ್ಲಿ ಹೇಳುತ್ತಿದ್ದರು. ಆ ರೀತಿ ಯಾರು ಯಾರು ಹೇಳಿದರು ಎಂದು ಈಗ ಹೇಳಲು ಆಗುವುದಿಲ್ಲ. ನಾನು ಹೇಳಿದಂತೆ ನಾನು ಬಸ್ ನಲ್ಲಿ ಸಂಚರಿಸುತ್ತಿದ್ದಾಗ ಎದುರಿನಿಂದ ಸ್ಕೂಟರ್ ಅತೀವೇಗ ಹಾಗೂ ನಿರ್ಲಕ್ಷ್ಯ ತನದಿಂದ ಬಂತು ಎಂದು ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಈ ದಿನ ಚಾಸಾ-1 ಮತ್ತು 2 ರವರೊಂದಿಗೆ ಬಂದಿದ್ದೇನೆ ಎಂದರೆ ಸರಿಯಲ್ಲ. ಅವರು ಹೇಳಿಕೊಟ್ಟ ಹಾಗೇ ನಾನು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕಣಕ್ಕೆ ಸಂಬಂದಪಟ್ಟಂತೆ ನಾನು ಬಣಕಲ್ ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿಲ್ಲ. ನಾನು ಹೇಳಿದಂತೆ ಆರೋಪಿ ಬಸ್ಸಿನ ಹಿಂಬದಿಯಿಂದ ಬಂದು ಬಸ್ಸನ್ನು ನಿಲ್ಲಿಸಿ ಚಾಸಾ-1 ಮತ್ತು 2 ರವರೊಂದಿಗೆ ಗಲಾಟೆ ಮಾಡಿ, ಕೈ ಮತ್ತು ಎಲ್ಮೇಟ್ ನಿಂದ ಹಲ್ಲೆ ಮಾಡಿರುತ್ತಾರೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿದಂತೆ ದ್ವಿಚಕ್ರ ವಾಹನದಲ್ಲಿ ಮಹಿಳೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ನಿರ್ವಾಹಕರನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದ ಸ್ಕೂಟರ್ ಸಂಖ್ಯೆ ಸುಳ್ಳು ಎಂದರೆ ಸರಿಯಲ್ಲ. ಆರೋಪಿ ಸಾರ್ವಜನಿಕ ಸ್ಥಳದಲ್ಲಿ ನಾಚಿಕೆಗೇಡಾಗಿ ನಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸರಿಯಾದ ಸಮಯಕ್ಕೆ ನಾನು ಹೋಗಬೇಕಾಗಿದ್ದ ಸ್ದಳ ಸೇರಲಿಲ್ಲ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ಹೇಳಿದಂತೆ ಗಲಾಟೆ ಮಾಡಿದ ವ್ಯಕ್ತಿ ಆರೋಪಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.